# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ ಕೊಪ್ಪಳ ಜಿಲ್ಲೆಯ ಕೊಪ್ಪಳ, ಗಂಗಾವತಿ, ಯಲಬುರ್ಗಾ ಮತ್ತು ಕುಷ್ಟಗಿ ತಾಲ್ಲೂಕುಗಳ ಗ್ರಾಮಗಳ ಆಯ್ಕೆ ಅನುಮೋದನೆ ಕುರಿತು.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:29.06.2012
2. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:04.07.2012
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳರವರ ಪತ್ರ ಸಂಖ್ಯೆ:ಬೃಮಕೈಸ:ಎಚ್.ಓ:1112:2012, ದಿನಾಂಕ:14.08.2012.

ಪ್ರಸ್ತಾವನೆ:

2012–13ನೇ ಸಾಲಿನ ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ 1000 ಗ್ರಾಮಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. 5ನೇ ಹಂತದ ಯೋಜನೆಯ ಅನುಷ್ಠಾನ ಮಾಡುವ ಬಗ್ಗೆ, ಗ್ರಾಮಗಳ ಆಯ್ಕೆ, ಅನುದಾನ ಹಂಚಿಕೆ ಇತ್ಯಾದಿ ವಿಷಯಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ವಿವರವಾಗಿ ಮೇಲೆ ಓದಲಾದ (1) ಮತ್ತು (2)ರ ಸರ್ಕಾರದ ಆದೇಶ ಹಾಗೂ ಸುತ್ತೋಲೆಯನ್ನು ಹೊರಡಿಸಲಾಗಿದೆ. ಅದರನ್ವಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳರವರು ನಿಯಮಾನುಸಾರ ಶಾಸಕರ ಶಿಫಾರಸಿನೊಂದಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದಿಸಲ್ಪಟ್ಟ ಕೊಪ್ಪಳ ತಾಲ್ಲೂಕಿನ 11 ಗ್ರಾಮಗಳು, ಗಂಗಾವತಿ ತಾಲ್ಲೂಕಿನ 11 ಗ್ರಾಮಗಳು, ಯಲಬುರ್ಗಾ ತಾಲ್ಲೂಕಿನ 15 ಗ್ರಾಮಗಳು ಮತ್ತು ಕುಷ್ಟಗಿ ತಾಲ್ಲೂಕಿನ 14 ಗ್ರಾಮಗಳು ಒಟ್ಟು 51 ಗ್ರಾಮಗಳ ಪಟ್ಟಿಯನ್ನು ಅನುಮೋದನೆ ನೀಡಲು ಓದಲಾಗಿದೆ (3)ರ ಪತ್ರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ನಿಯಮಗಳನ್ವಯ ಪರಿಶೀಲಿಸಿದ್ದು, ಆಯ್ಕೆ ಪಟ್ಟಿಯನ್ನು ಅಧಿಕೃತವಾಗಿ ಹೊರಡಿಸಲು ಸರ್ಕಾರಿ ಆದೇಶದ ಅಗತ್ಯವಿದೆ. ಅನುಬಂಧದಲ್ಲಿರುವ ಕೊಪ್ಪಳ ತಾಲ್ಲೂಕಿನ 11 ಗ್ರಾಮಗಳು, ಗಂಗಾವತಿ ತಾಲ್ಲೂಕಿನ 11 ಗ್ರಾಮಗಳು, ಯಲಬುರ್ಗಾ ತಾಲ್ಲೂಕಿನ 15 ಗ್ರಾಮಗಳು ಮತ್ತು ಕುಷ್ಟಗಿ ತಾಲ್ಲೂಕಿನ 14 ಗ್ರಾಮಗಳು ಒಟ್ಟು 51 ಗ್ರಾಮಗಳಲ್ಲಿ ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತವನ್ನು ಅನುಷ್ಠಾನಗೊಳಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:86:ಸುಗ್ರಾಯೋ:2012.** **ಬೆಂಗಳೂರು, ದಿನಾಂಕ:23.08.2012**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ಕೊಪ್ಪಳ ಜಿಲ್ಲೆಯ 4 ತಾಲ್ಲೂಕುಗಳ 51 ಗ್ರಾಮಗಳಿಗೆ ಅನುಬಂಧದಲ್ಲಿ ನಮೂದಿಸಿರುವಂತೆ ಸದರಿ ಗ್ರಾಮಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ. ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತವನ್ನು ಅನುಷ್ಠಾನಗೊಳಿಸುವಾಗ ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಆದೇಶಿಸಿದೆ.

1. ಓದಲಾಗಿದೆ (1)ರ ಸರ್ಕಾರಿ ಆದೇಶದಲ್ಲಿ ಹಾಗೂ ಓದಲಾಗಿದೆ (2)ರ ಸುತ್ತೋಲೆಯಲ್ಲಿ ಹೊರಡಿಸಲಾದ ಯೋಜನಾ ಮಾರ್ಗಸೂಚಿ ಪ್ರತಿ ಗ್ರಾಮಕ್ಕೆ ಸಂಬಂಧಿಸಿದಂತೆ ಸಮಗ್ರ ಅಭಿವೃದ್ಧಿ ಯೋಜನೆಯನ್ನು ರೂಪಿಸಿ ಅನುಮೋದನೆ ನೀಡಿ ಕಾರ್ಯಗತಗೊಳಿಸುವುದು.
2. ಸರ್ಕಾರಿ ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-1ರಲ್ಲಿ ಸೂಚಿಸಿದ ತಾಲ್ಲೂಕುವಾರು ನಿಗದಿಪಡಿಸಿರುವ ಅನುದಾನದ ಮಿತಿಯೊಳಗೆ ಕಾರ್ಯಕ್ರಮವನ್ನು ಕೈಗೊಳ್ಳುವುದು.
3. ಗ್ರಾಮವಾರು ಅನುದಾನವನ್ನು ನಿಗದಿಪಡಿಸುವಾಗ ಗ್ರಾಮದ ಜನಸಂಖ್ಯೆಗನುಗುಣವಾಗಿ ತಲಾನುದಾನ ನಿಯಮಕ್ಕೆ ತಕ್ಕಂತೆ ನಿಗದಿಪಡಿಸಿಕೊಳ್ಳತಕ್ಕದ್ದು.
4. ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-2ರ ವೇಳಾಪಟ್ಟಿಗನುಗುಣವಾಗಿ ಕಾರ್ಯಾನುಷ್ಠಾನ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು(ಸು.ಗ್ರಾ) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಯನ್ನು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೊಪ್ಪಳ.
2. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಕೊಪ್ಪಳ.
3. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮಾನ್ಯ ಉಪ ಮುಖ್ಯ ಮಂತ್ರಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಮುಖ್ಯ ಲೆಕ್ಕಾಧಿಕಾರಿ ಮತ್ತು ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ.
6. ಸಂಕಲನಕಾರರು, ರಾಜ್ಯಪತ್ರ, ಬೆಂಗಳೂರು.
7. ಮಹಾಲೇಖಪಾಲರು, ಬೆಂಗಳೂರು.
8. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪ. ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9. ಸಂಪಾದಕರು, ಕರ್ನಾಟಕ ವಿಕಾಸ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.
10. ಹೆಚ್ಚುವರಿ.

## ಅನುಬಂಧ

### ಕೊಪ್ಪಳ ಜಿಲ್ಲೆಯ 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ಅಭಿವೃದ್ಧಿಗೊಳಿಸಿರುವ ಗ್ರಾಮಗಳು

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:86:ಸುಗ್ರಾಯೋ:2012, ದಿನಾಂಕ:23.08.2012**

**ಜಿಲ್ಲೆ: ಕೊಪ್ಪಳ**

| ಕ್ರ.ಸಂ. | ತಾಲ್ಲೂಕು | ಕ್ರ.ಸಂ. | ಗ್ರಾಮಗಳ ಹೆಸರು | 2001ರ ಜನಗಣತಿ ಪ್ರಕಾರ ಜನಸಂಖ್ಯೆ | ನಿಗದಿಪಡಿಸಬೇಕಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|---|
| 1 | ಕೊಪ್ಪಳ | 1 | ಕಾತರಕಿ–ಗುದ್ಲಾನೂರ | 4194 | 105.90 |
| | | 2 | ಮುನಿರಾಬಾದ್ | 8115 | 204.90 |
| | | 3 | ಹೊಸಳ್ಳಿ | 1692 | 42.72 |
| | | 4 | ಮುದ್ದಾಬಳ್ಳಿ | 2088 | 52.72 |
| | | 5 | ಶಹಾಪುರ | 1857 | 46.89 |
| | | 6 | ಮಾದಿನೂರ | 2402 | 60.65 |
| | | 7 | ಮತ್ತೂರು | 1764 | 44.54 |
| | | 8 | ಬುಡಶೆಟನಾಳ | 1126 | 28.43 |
| | | 9 | ಲೇಬಗೇರಾ | 1616 | 40.80 |
| | | 10 | ಚಿಕ್ಕಬೊಮ್ಮನಾಳ | 1881 | 47.49 |
| | | 11 | ಯಲಮಗೇರಿ | 1622 | 40.95 |
| | | | **ಒಟ್ಟು** | **28357** | **716.00** |
| 2 | ಗಂಗಾವತಿ | 1 | ಸಾಣಾಪುರ | 1691 | 42.12 |
| | | 2 | ರಾಂಪುರ | 2041 | 50.84 |
| | | 3 | ಹೊಸಹಿರೇ ಬೆಣಕಲ್ | 1937 | 48.25 |
| | | 4 | ಚಿಕ್ಕಜಂತಕಲ್ | 3964 | 98.74 |
| | | 5 | ಡಾಣಾಪುರ | 3327 | 82.87 |
| | | 6 | ಉಳೇನೂರು | 3100 | 77.22 |
| | | 7 | ಮರ್ಲಾನಹಳ್ಳಿ | 5234 | 130.37 |
| | | 8 | ಚಿಕ್ಕಮಾದಿನಾಳ | 2590 | 64.51 |
| | | 9 | ಸಿಂಗನಾಳ | 3277 | 81.62 |
| | | 10 | ಯರಡೋಣ | 6932 | 172.66 |
| | | 11 | ಹುಲಸನಹಟ್ಟಿ | 996 | 24.81 |
| | | | **ಒಟ್ಟು** | **35089** | **874.00** |

| | | | | | |
|---|---|---|---|---|---|
| 3 | ಯಲಬುರ್ಗಾ | 1 | ಹಿರೇಬಿಡನಾಳ | 1034 | 25.58 |
| | | 2 | ಹಿರೇಅರಳಿಹಳ್ಳಿ | 2310 | 57.15 |
| | | 3 | ಗೆದಗೇರಿ | 2296 | 56.81 |
| | | 4 | ಸೊಂಪುರ | 1643 | 40.65 |
| | | 5 | ಬಂಡಿಹಾಳ | 1713 | 42.38 |
| | | 6 | ಸಂಕನೂರು | 2172 | 53.74 |
| | | 7 | ಬಿನ್ನಾಳ | 2214 | 54.78 |
| | | 8 | ಯಡಿಯಾಪುರ | 1861 | 46.04 |
| | | 9 | ಚಿಕ್ಕೆನಕೊಪ್ಪ | 1689 | 41.79 |
| | | 10 | ಕೋಮಲಾಪುರ | 1187 | 29.37 |
| | | 11 | ರ್‍ಯಾವಣಕಿ | 1938 | 47.95 |
| | | 12 | ನೆಲಜೇರಿ | 1223 | 30.26 |
| | | 13 | ತಮ್ಮರಗುದ್ದಿ | 1910 | 47.26 |
| | | 14 | ಕುದರಿ ಕೊಟಗಿ | 994 | 24.59 |
| | | 15 | ನಿಂಗಲ ಬಂಡಿ | 1885 | 46.64 |
| | | | **ಒಟ್ಟು** | **26069** | **645.00** |
| 4 | ಕುಷ್ಟಗಿ | 1 | ತುಗ್ಗಲದೋಣಿ | 2086 | 52.12 |
| | | 2 | ಕುಂಬಳಾವತಿ | 2083 | 52.05 |
| | | 3 | ಕಲಾಲಬಂಡಿ | 2422 | 60.52 |
| | | 4 | ನಿಡಶೇಸಿ | 2023 | 50.55 |
| | | 5 | ಬಿಜಕಲ್ಲ | 2118 | 52.92 |
| | | 6 | ಕಬ್ಬರಗಿ | 2762 | 69.02 |
| | | 7 | ವಣಗೇರಿ | 1953 | 48.80 |
| | | 8 | ಕೌಲಬೋದೂರು | 1939 | 48.45 |
| | | 9 | ಗೋತಗಿ | 1905 | 47.60 |
| | | 10 | ಮನ್ನೇರಾಳ | 1960 | 48.98 |
| | | 11 | ಜಹಗೀರ ಗುಡದೂರ್ | 1754 | 43.83 |
| | | 12 | ಕಿಡದೂರು | 729 | 18.22 |
| | | 13 | ಮುದ್ದಲಗುಂಡಿ | 751 | 18.77 |
| | | 14 | ಸಿದ್ದಾಪುರ | 527 | 13.17 |
| | | | **ಒಟ್ಟು** | **25012** | **625.00** |
| | | | **ಜಿಲ್ಲೆಯ ಒಟ್ಟು ಮೊತ್ತ** | **114527** | **2860.00** |

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಸುಗ್ರಾ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ